ಸಲೂ ಸಿದ್ಧವೆನ್ನುತ್ತಾರೆ. "ಹೆಣ್ಣು ಮಾಯೆಯಲ್ಲ. ಮನದೊಳಗಣ ಮೋಹವೇ ಮಾಯೆ" ಎಂಬುದನ್ನು ಸಾಧಿಸಿತೋರಿಸಿದ್ದಾರೆ. ಬುದ್ಧ ಕೂಡ ಮಡದಿಯ ಮೋಹ ತನ್ನನ್ನು ಬಂಧಿಸಬಹುದೆಂದು ಬಗೆದು ನವಜಾತ ಶಿಶುವಿನೊಡನಿದ್ದ ಸತಿಗೆ ತಿಳಿಸದೆಯೆ ನಡುರಾತ್ರಿಯಲ್ಲಿ ಹೊರಟು ಹೋಗುತ್ತಾನೆ. ಆದರೆ ಶ್ರೀರಾಮಕೃಷ್ಣರು ಸಂನ್ಯಾಸ ಜೀವನಕ್ಕೆ "ಸತಿಯ" ಅಪ್ಪಣೆ ಬೇಡುತ್ತಾರೆ! ಅವರ ಜೀವನ ನಿರ್ವಹಣೆಯ ಹೊಣೆ ಹೊರುತ್ತಾರೆ. ಚಿನ್ನದ ಬಳೆ ತೊಡಿಸುತ್ತಾರೆ. ತಮ್ಮ ಆಧ್ಯಾತ್ಮಿಕ ಜೀವನದ ಉನ್ಮಾದ ಅವಸ್ಥೆಯಲ್ಲಿ ಬೃಂದಾವನದಲ್ಲೇ ಉಳಿಯಲೆಳಸಿದ್ದ ರಾಮಕೃಷ್ಣರು ತಾಯ ನೆನಪಾದೊಡನೆಯೆ ದಕ್ಷಿಣೇಶ್ವರಕ್ಕೆ ಓಡುತ್ತಾರೆ. ತಾಯ ಸಂರಕ್ಷಣೆಯ ಕರ್ತವ್ಯ ಮರೆಯಲಿಲ್ಲ. ತಮ್ಮಬಳಿಗೆ ಬರುತ್ತಿದ್ದ ಗೃಹಸ್ಥ ಭಕ್ತರಿಗೆ, ಆದರ್ಶಗೃಹಸ್ಥ ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ತಿಳಿಹೇಳುತ್ತಾರೆ.

ಹೀಗೆ ಸಂನ್ಯಾಸಜೀವನದ ಆದರ್ಶಗಳನ್ನೂ ಸಾಂಸಾರಿಕ ಜೀವನದ ಆದರ್ಶವನ್ನೂ ಎತ್ತಿಹಿಡಿಯುವುದರ ಮೂಲಕ "ಸಂನ್ಯಾಸ" "ಸಂಸಾರ" ಎರಡರ "ಸಮನ್ವಯ"ವನ್ನು ಸಾಧಿಸಿ ತೋರಿಸಿದ್ದಾರೆ. ಈ ಎರಡು ಬದುಕಿನ ಮೂಲಕವೂ ಭಗವಂತನನ್ನು ಪಡೆಯಬಹುದೆಂಬುದನ್ನು ಈ ಜಗತ್ತಿಗೆ ಸಾರಿದ್ದಾರೆ. ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರನ್ನು "ಅವತಾರವರಿಷ್ಠಾಯ" ಎಂದು ಕರೆದಿದ್ದಾರೆ. ಆ ಮಾತು "ಧ್ವನಿ"ಪೂರ್ಣವಾಗಿದೆಯಲ್ಲವೆ?

❋

# ಪ್ರಹಸನ ಪ್ರಸಂಗ

ನಾವು ನಮ್ಮ ಕೋಪ, ದ್ವೇಷ, ವ್ಯಾಮೋಹ ಮುಂತಾದ ಭಾವೋದ್ವೇಗಗಳಿಗೆ ವಶರಾದಾಗ ನಮ್ಮ ಆಲೋಚನಾ ಶಕ್ತಿಯನ್ನು ಕಳೆದುಕೊಳ್ಳುತ್ತೇವೆ, ನಮ್ಮ ನಿರ್ಣಯ ಸಾಮರ್ಥ್ಯ ಕುಂಠಿತವಾಗುತ್ತದೆ. ಆಗ ಮಾಡಬಾರದುದನ್ನು ಮಾಡಿ ಅನಂತರ ಪರಿತಪಿಸುತ್ತೇವೆ.

ಒಬ್ಬ ಕೈಗಾರಿಕೋದ್ಯಮಿಯು ಮುನ್ಸೂಚನೆಯಿಲ್ಲದೆ ತನ್ನ ಕಾರ್ಖಾನೆಗೆ ಭೇಟಿ ನೀಡುತ್ತಾನೆ—ಅಲ್ಲಿ ಕೆಲಸ ಹೇಗೆ ನಡೆಯುತ್ತಿದೆ ಎಂದು ಪರೀಕ್ಷಿಸಲು. ಅವನು ಕೋಠಿಯಲ್ಲಿ ಓಡಾಡುತ್ತಿರುವಾಗ ಒಬ್ಬ ಯುವಕನು ಸೋಮಾರಿಯಂತೆ ಏನೂ ಕೆಲಸವಿಲ್ಲದೆ ಗೋಡೆಗೆ ಒರಗಿಕೊಂಡು ನಿಂತಿರುವುದನ್ನು ಕಂಡನು. ಕೈಗಾರಿಕೋದ್ಯಮಿಗೆ ತುಂಬ ಕೋಪ ಬಂತು. "ನಿನಗೆಷ್ಟೊ ಸಂಬಳ?" ಎಂದು ಜೋರಾಗಿ ಕೇಳಿದನು.

ಆ ಯುವಕ ಹೇಳಿದ, "ಒಂದು ವಾರಕ್ಕೆ ಒಂದು ಸಾವಿರ ರೂಪಾಯಿ" ಎಂದು.

ಕೈಗಾರಿಕೋದ್ಯಮಿ ತನ್ನ ಜೇಬಿನಿಂದ ಪರ್ಸನ್ನು ಹೊರಕ್ಕೆ ತೆಗೆದು ಅದರಿಂದ ಒಂದು ಸಾವಿರ ರೂಪಾಯಿಗಳನ್ನು ಎಣಿಸಿ ಆ ಯುವಕನಿಗೆ ಕೊಟ್ಟು ಹೇಳಿದ, "ತಗೊ, ಒಂದು ವಾರದ ಸಂಬಳ ಇಲ್ಲಿದೆ. ಇದನ್ನು ತಗೊಂಡು ಹೊರಟುಹೋಗು. ಇನ್ನೆಂದೂ ಈ ಕಡೆ ಮುಖ ತೋರಿಸಬೇಡ," ಎಂದು ಗುಡುಗಿದ.

ಆ ಯುವಕನು ಬಾಯಿ ಪಿಟಕ್ಕೆನ್ನದೆ ನೋಟುಗಳನ್ನು ಜೇಬಿಗೆ ಹಾಕಿಕೊಂಡು ಹೊರಟೇಹೋದ.

ಕೋಠಿಯ ನಿರ್ವಾಹಕನು ಸ್ವಲ್ಪ ದೂರದಲ್ಲಿ ನಿಂತು ಇದನ್ನು ನೋಡುತ್ತಿದ್ದನು. ಅವನಿಗೆ ಅತ್ಯಾಶ್ಚರ್ಯವಾಯಿತು. ಕೈಗಾರಿಕೋದ್ಯಮಿ ಅವನ ಹತ್ತಿರ ಹೋಗಿ, "ಈ ಆಸಾಮಿ ಯಾವಾಗಿನಿಂದ ಇಲ್ಲಿ ಕೆಲಸ ಮಾಡುತ್ತಿದ್ದಾನೆ?" ಎಂದು ವಿಚಾರಿಸಿದ.

"ಅವನು ಇಲ್ಲಿಯ ಕೆಲಸಗಾರನೇ ಅಲ್ಲ. ಅವನು ಒಂದು ಪ್ಯಾಕೆಟ್ಟನ್ನು ಕೊಡುವುದಕ್ಕೆ ಬಂದಿದ್ದ ಅಷ್ಟೆ."

❋❋❋❋

ಹಣದ ವ್ಯಾಮೋಹ ಮನುಷ್ಯನನ್ನು ಎಲ್ಲ ನೈತಿಕ ಪ್ರಜ್ಞೆಯಿಂದಲೂ ಮಾನವೀಯ ಕಳಕಳಿಯಿಂದಲೂ ದೂರವಾಗಿಸುತ್ತದೆ. ವ್ಯವಹಾರ ಕುಶಲತೆಯ ಮುಸುಕಿನಲ್ಲಿ ತನ್ನ ಧನ ಸಂಗ್ರಹದ ವ್ಯಾಮೋಹವನ್ನು ಅವನು ಪೋಷಿಸುತ್ತಾನೆ. ಕೆಲವೊಮ್ಮೆ ಇದನ್ನು ಒಂದು ಸಂಸ್ಥೆಯ ಒಳಿತಿಗಾಗಿ ಮಾಡುತ್ತಿರುವುದು ಎಂದು ಅವನು ಅದನ್ನು ಸಮರ್ಥಿಸಬಹುದು. ಅಂದರೆ ಆಗ ಸಂಸ್ಥೆಯ ಹೆಸರಿನಲ್ಲಿ ತನ್ನ ವ್ಯಾಮೋಹವನ್ನು ಪೋಷಿಸುತ್ತಾನೆ.

ಒಬ್ಬ ಜಮೀನುದಾರನಿದ್ದ. ಅವನಿಗೆ ನೂರಾರು ಎಕರೆ ಹೊಲ ಇತ್ತು. ಅದರಲ್ಲಿ ಸ್ವಲ್ಪ ಭಾಗವನ್ನು ಬೇರೆಯವರಿಗೆ ಮಾರಿದನು. ಮಾರಾಟದ ಲೆಕ್ಕ ಪತ್ರಗಳೆಲ್ಲ ಮುಗಿದಮೇಲೆ ಅವನ ಮಾರಾಟಗಾರನಿಗೆ (salesman) ತಿಳಿದು ಬಂತು ಮಾರಿದ ಜಾಗ ಸಂಪೂರ್ಣ ನೀರಿನಿಂದ ಆವೃತವಾಗಿದೆ ಎಂದು.

ಈಗೇನು ಮಾಡುವುದು? ಅದನ್ನು ಕೊಂಡುಕೊಂಡವನು ಕೋಪೋದ್ರಿಕ್ತನಾಗಿ ಹಿಂತಿರುಗಿ ಬರುವುದು ನಿಶ್ಚಯ. ಮಾರಾಟಗಾರ ಜಮೀನುದಾರನಿಗೆ ಹೇಳಿದ, "ಈಗ ಏನು ಮಾಡುವುದು? ಅವನು ಬಂದಾಗ ಅವನಿಗೆ ಹಣವನ್ನು ಹಿಂತಿರುಗಿಸಿಬಿಡುವುದೆ?"

"ಏನು, ಹಣ ಹಿಂತಿರುಗಿಸುವುದೆ? ನೀನೆಂಥ ಮಾರಾಟಗಾರ? ಅವನಿಗೆ ಒಂದು ಮನೆದೋಣಿ(houseboat)ಯನ್ನು ಮಾರಿದರಾಯಿತು," ಎಂದನಾ ಜಮೀನುದಾರ.

❋

ಸ್ವಹದಾನ: ಪಾಪ್ಯುಲರ್ ಎಂಟರ್‌ಪ್ರೈಸಸ್, ಬೆಂಗಳೂರು